


ಜಿ.ಎನ್. ಧನಂಜಯ ಮೂರ್ತಿ

# ಓ! ಕುವೆಂಪು ವಾಙ್ಮಯದ ಪುನರುಕ್ತಿ



ಕುವೆಂಪು ರಚಿಸಿರುವ ಸಮಗ್ರ ಸಾಹಿತ್ಯವನ್ನು ಗಮನಿಸಿದರೆ 'ಓ' ಎನ್ನುವ ಕರೆಧ್ವನಿ ಪುನರುಕ್ತಿ ಆಗಿರುವುದು ಗೋಚರಿಸುತ್ತದೆ. ಅವರ ಸಾಹಿತ್ಯದಲ್ಲಿ ಪುನರಪಿ ಉಲಿಯಂತೆ ಕಾಣಿಸಿಕೊಳ್ಳುವ 'ಓ' ಅನ್ನು ವಿಶ್ಲೇಷಿಸುವುದು ಈ ಬರಹದ ಉದ್ದೇಶ.

ಕುವೆಂಪು 'ಓ' ಎನ್ನುವ 'ಉಲಿ'ಯನ್ನು ಹೊಸದಾಗಿ ಸೃಜಿಸಿಲ್ಲವಾದರೂ, ಅವರ ಅಭಿವ್ಯಕ್ತಿಯಲ್ಲಿ ಮತ್ತೆ ಮತ್ತೆ ಅನುರಣನವಾಗುವುದರಿಂದ ಅವರ ರಚನೆಗಳಲ್ಲಿ ಈ ಉಲಿಗೆ ವಿಶೇಷವಾದ ಸ್ಥಾನಮಾನವಿದೆ. ಅದು ಅವರ ಒಟ್ಟಾರೆ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಸಂದರ್ಭವನ್ನು ಗಮನಿಸಿದರೆ ಇದು ನಮಗೆ ಗೋಚರವಾಗುತ್ತದೆ. ಪ್ರಾದೇಶಿಕವಾಗಿ ಕೊಪ್ಪ, ತೀರ್ಥಹಳ್ಳಿ ಸೇರಿದಂತೆ ಮಲೆನಾಡಿನ ಜನಭಾಷೆಯಲ್ಲಿ ಈ ಉಲಿ ಹಾಸುಹೊಕ್ಕಾಗಿದೆ. ಜನಭಾಷೆಯಲ್ಲಿನ ಈ ಏಕಾಕ್ಷರದ ಉಕ್ತಿ ಕುವೆಂಪು ಅವರ ಅಭಿವ್ಯಕ್ತಿಯಲ್ಲಿ ಉಕ್ತಿವೈಚಿತ್ರ್ಯವಾಗಿ, ಪರಿಣಾಮಕಾರಿಯಾಗಿ

**ಕನ್ನಡ ಭಾಷೆಯಲ್ಲಿ ಕೆಲವೊಮ್ಮೆ ಏಕಾಕ್ಷರಗಳೇ ಪದಸಂವಹನಗಳಾಗಿ ಬಳಕೆಯಾಗುತ್ತವೆ. ಅಂತೆಯೇ 'ಓ' ಎನ್ನುವ ಉದ್ಗಾರೋಕ್ತಿಯೂ ಬಳಕೆಯಲ್ಲಿದ್ದು, ಕುವೆಂಪು ವಾಙ್ಮಯದಲ್ಲಿ ಚಮತ್ಕಾರಭರಿತವಾಗಿ ಮತ್ತು ವೈವಿಧ್ಯಮಯವಾಗಿ ಇದು ಪ್ರಯೋಗವಾಗಿರುವುದನ್ನು ಗುರುತಿಸಬಹುದು.**